## ಇಲ್ಲಿಯವರೆಗೆ

ಚಿತ್ರಕಲೆಯ ಬಗ್ಗೆ ತರಬೇತಿ ಪಡೆಯಲು ಹೋಗಿದ್ದ ರವಿವರ್ಮ ತನ್ನ ಸಾಮಾನು ಸರಂಜಾಮುಗಳೊಂದಿಗೆ ಕಿಳಿಮಾನೂರಿಗೆ ಒಬ್ಬನೇ ವಾಪಸ್ ಮರಳಿ ಬಂದಾಗ ಆತನ ತಾಯಿ 'ಪುರುತಾರ್ಥಿ ಬಂದಿಲ್ಲವೇ?' ಎಂದು ಪ್ರಶ್ನಿಸುತ್ತಾರೆ. ತಾಯಿಯ ಎಲ್ಲ ಪ್ರಶ್ನೆಗಳಿಗೆ ಒಂದೊಂದೇ ಶಬ್ದದಲ್ಲಿ ರವಿವರ್ಮ ಉತ್ತರಿಸಿದಾಗ ಅಮ್ಮ ತನ್ನ ಮಾವನ ಕೋಣೆಗೆ ಹೋಗಿ ಪುಕಾರು ಮಾಡುತ್ತಾಳೆ. ತನ್ನ ಕೋಣೆಯನ್ನು ಮಂಗಳ ಸ್ವಚ್ಛಗೊಳಿಸಿ ಕ್ಯಾನ್ವಾಸ್, ಬಣ್ಣ, ಕುಂಚ ಎಲ್ಲವನ್ನೂ ಸಿದ್ಧಗೊಳಿಸಿರುತ್ತಾಳೆ. ಆಗ ರವಿವರ್ಮ ಒಂದು ಸುಂದರ ಪುಷ್ಪವನ್ನು ಚಿತ್ರಿಸುತ್ತಾನೆ. ಮಂಗಳ ಅದರ ಮೇಲೆ ಒಂದು ದುಂಬಿಯ ಚಿತ್ರ ಬರೆಯುತ್ತಾಳೆ. ಅದು ಬಹಳ ನೈಜವಾಗಿ ಮೂಡಿಬರುತ್ತದೆ, ಹೀಗೆ ತಾಯಿ ಮಗುವನ್ನು ಎತ್ತಿಕೊಂಡು ಚಂದಿರನನ್ನು ತೋರಿಸುವ ಚಿತ್ರ ಬಿಡಿಸುತ್ತಾನೆ. ಮುಂದೆ ತಿರುವನಂತಪುರದ ಅರಮನೆಯಲ್ಲಿ ಚಿತ್ರಕಲಾ ಪ್ರದರ್ಶನದಲ್ಲಿ ಭಾಗವಹಿಸಲು ಕರೆ ಬರುತ್ತದೆ. ಮುಂದೆ ರವಿವರ್ಮನ ಮೊದಲ ತೈಲ ಭಾವಚಿತ್ರ ಮದರಾಸಿನ ಪ್ರದರ್ಶನಕ್ಕೂ ರವಾನಿಸಲಾಗುತ್ತದೆ, ಮಹಾರಾಜ ಆಯಿಲ್ಯ ತಿರುನಾಳ್‌ಗೂ ಬಹಳ ಖುಷಿಯಾಗುತ್ತದೆ.

ಈ ಮಧ್ಯೆ ಸ್ವಯಂಭುಲಿಂಗವೆಂದೇ ಪ್ರಸಿದ್ಧಿ ಪಡೆದ ವಾಲ್ಕೇಶ್ವರ ದೇವಾಲಯಕ್ಕೆ ರಾಣಿ ಸುಗಂಧ ಹೋಗುವಾಗ ಆಕೆಯನ್ನು ಒಬ್ಬ ಸುಂದರ ತರುಣ ಬಹಳ ಗಮನಿಸುತ್ತಿರುವುದು ಆಕೆಯ ಗಮನಕ್ಕೆ ಬರುತ್ತದೆ.

ಕಾಣುತ್ತದೆಂದು ತಂದೆ... ನಿಮ್ಮ ಯಾವುದೋ ಹಳೆಯ ನೆನಪನ್ನು ಕೆದಕಲು ಅಲ್ಲ...'

'ಅಂಥದೇನಿಲ್ಲ ಬಿಡು. ನಾನೊಮ್ಮೆ ಬೊಂಬಾಯಿನಿಂದ ಮಾವೇಲ್ಲಿಕರಾಗೆ ನನ್ನ ಪತ್ನಿಯನ್ನು ನೋಡಲು ಹೋದೆ, ಹೋಗುವಾಗ ಇದೇ ರೀತಿಯ ತೂಗುದೀಪ ಕೊಂಡೊಯ್ದೆ. ಅವಳಿಗೆ ಅಚ್ಚರಿ ಕೊಡಬೇಕೆಂದು ಅವಳಿಲ್ಲದಾಗ ನಾನೇ ತೂಗುದೀಪವನ್ನು ಅವಳ ಕೋಣೆಯನ್ನು ಹಾಕಿ, ಪಕ್ಕದ ಕೋಣೆಯಲ್ಲಿ ಕಾದುಕುಳಿತೆ. ನನ್ನ ಪತ್ನಿ ಪುರತಾರ್ಥಿ ಬಂದವಳೇ ಆ ತೂಗುದೀಪವನ್ನು ಕಂಡು ಕೋಪದಿಂದ ಎರಡೇಟು ಹಾಕಿ ಒಡೆದುಬಿಟ್ಟಳು. ತಕ್ಷಣ ಓಡಿ ಹೋಗಿ ಬಚ್ಚಲು ಕೋಣೆ ಸೇರಿಕೊಂಡು ಅಳತೊಡಗಿದಳು. ನಾನು ಗಾಬರಿಯಾಗಿ ಬಂದು ಕೇಳಿದೆ. 'ಏನಾಯ್ತು ಪುರು? ನಿನಗೆ ಈ ದೀಪ ಹಿಡಿಸಲಿಲ್ಲವೆ?'

ಆಗವಳು 'ನಿಮಗೆ ಕೋಪ ಬಂದಿತೇನೋ. ನಾನೇನು ನಿಮ್ಮನ್ನು ಆಭರಣಗಳು, ತೂಗುದೀಪಗಳು ಬೇಕೆಂದು ಕೇಳಿದ್ದೇನೆಯೇ? ನನಗೆ ಬೇಕಾಗಿರುವುದು ನೀವು... ಅದೇ ಇಲ್ಲದಿರುವಾಗ ಇವೆಲ್ಲಾ ಏಕೆ?' ಎಂದು ಬಿಟ್ಟಳು. ಆ ನೆನಪುಗಳೆಲ್ಲಾ ಈ ತೂಗುದೀಪ ನೋಡಿದೊಡನೆ ನುಗ್ಗಿಬಂತು. ದಯವಿಟ್ಟು ಕ್ಷಮಿಸು. ನಿನ್ನ ಉಡುಗೊರೆಗೆ ಅವಮಾನ ಮಾಡಬೇಕೆಂದಲ್ಲ.'

ಮತ್ತೆ ನಾನೇ ಹೇಳಿದೆ 'ಈ ತೂಗುದೀಪದಲ್ಲಿ ಐದು ಮೋಂಬತ್ತಿಗಳಿವೆ. ಆದರೂ ಅದೆಷ್ಟೊಂದು ಬೆಳಕು ನೀಡುತ್ತಿದೆ. ಕಾರಣ ಅದರ ಸುತ್ತಲಿರುವ ನೂರಾರು ಹರಳುಗಳಿಂದ! ಮನುಷ್ಯನ ಜೀವನವೂ ಹಾಗೆಯೇ. ಸುತ್ತಲಿರುವ ಜನ ಒಳ್ಳೆಯವರಾಗಿದ್ದರೆ, ಅವನನ್ನು ಪ್ರೀತಿಸುವವರಿದ್ದಾರೆ. ಅವನು ಉತ್ತುಂಗಕ್ಕೆ ಏರಬಲ್ಲ. ಸುತ್ತಲಿರುವವರು ಈರ್ಷ್ಯೆಯಿಂದ ತುಂಬಿದವರಾದರೆ, ಅವನೊಬ್ಬ ಒಂಟಿ ಮೋಂಬತ್ತಿಯಂತಾಗುತ್ತಾನೆ. ಬೆಳಕನ್ನೂ ಹರಡಲಾರ.'

ಮರುದಿನ ಸುಗಂಧ ನನ್ನ ಮನೆಗೆ ಬಂದಾಗ ದಿವಾನ್ ಮಾಧವರಾಯರು ಬಂದರು. ದಿವಾನರಿಗೆ ನಾನು ಉಡುಗೊರೆಯಾಗಿ ಕೊಟ್ಟ 'ನಾಯರ್ ಸ್ತ್ರೀ'ಯ ತೈಲಚಿತ್ರವನ್ನು ಅವರು ಪುಣೆಯ ಚಿತ್ರಕಲಾ ಪ್ರದರ್ಶನದಲ್ಲಿ ಪ್ರದರ್ಶಿಸಿ ಅದಕ್ಕೆ ದೊರೆತ ಚಿನ್ನದ ಪದಕವನ್ನು ನನಗೆ ಕೊಡಲು ಬಂದಿದ್ದರು. ಜೊತೆಗೆ ಬೊಂಬಾಯಿಯ ಗವರ್ನರ್ ಸರ್ ಜೇಮ್ಸ್ ಫರ್ಗೂಸನ್ ತಮಗೂ ಅಂಥದ್ದೇ ತೈಲಚಿತ್ರ ಬೇಕೆಂದು ಕೇಳಿದ್ದರಂತೆ. ತಮ್ಮ ಬಳಿ ಇರುವುದನ್ನು ಕೊಡಲು ಇಷ್ಟವಿಲ್ಲದೆ ಸಂದಿಗ್ಧದಲ್ಲಿ ಸಿಲುಕಿಕೊಂಡಿದ್ದರು ದಿವಾನರು. ಅವರ ಪೀಕಲಾಟ ನೋಡಿ ನಾನು ನಗುತ್ತಾ ಹೇಳಿದೆ.

'ಅದಕ್ಕೇಕೆ ಇಷ್ಟು ಚಿಂತೆ ದಿವಾನರೇ, ನಿಮ್ಮ ಬಳಿಯಿರುವುದನ್ನು ನೀವಿಟ್ಟುಕೊಳ್ಳಿ. ನಾನು ರಚಿಸುವ ಎಲ್ಲಾ ಚಿತ್ರಗಳದ್ದೂ ಇನ್ನೊಂದು ಪ್ರತಿ ಮಾಡಿಯೇ ಇಟ್ಟಿರುತ್ತೇನೆ. ಆ ನಾಯರ್ ಸ್ತ್ರೀಯ ಚಿತ್ರದ ಎರಡು ಪ್ರತಿಗಳಿವೆ. ನೀವು ಒಂದನ್ನು ತೆಗೆದುಕೊಂಡು ಹೋಗಿ ಗವರ್ನರ್ ಸಾಹೇಬರಿಗೆ ಕೊಡಿ' ಎನ್ನುತ್ತಾ ನನ್ನ ಕಪಾಟಿನಲ್ಲಿಟ್ಟ ಚಿತ್ರಗಳನ್ನು ತಂದುಕೊಟ್ಟೆ. ಹೊರಡುವ ಮುನ್ನ ದಿವಾನರು ಹೇಳಿದರು, 'ಬರೋಡಾ ಸಂಸ್ಥಾನದ ಮಹಾರಾಜ ಸಯ್ಯಾಜಿರಾವ್‌ರವರ ಪಟ್ಟಾಭಿಷೇಕ ಸಮಾರಂಭಕ್ಕೆ ನಿಮಗೆ ಆಹ್ವಾನಪತ್ರಿಕೆ ಕಳುಹಿಸಿಕೊಟ್ಟಿದ್ದಾರೆ. ನೀವು ಬರೋಡಾಕ್ಕೆ ಹೊರಡುವ ತಯಾರಿ ಮಾಡಿಕೊಳ್ಳಿ' ಎಂದರು. ಸುಗಂಧ 'ನಾನೂ ಆ ಚಿತ್ರವನ್ನು ನೋಡಬಹುದೇ?' ಎಂದಳು. 'ಧಾರಾಳವಾಗಿ' ಎಂದೆ. ಸ್ವಲ್ಪಹೊತ್ತು ಅದನ್ನೇ ನೋಡುತ್ತಿದ್ದಳು. 'ತುಂಬಾ ಮೋಹಕವಾದ ಮುಗುಳ್ನಗೆ; ಮಾದಕವಾದ ಸೌಂದರ್ಯ ಇಷ್ಟೊಂದು ಪದಕಗಳನ್ನು ಗೆದ್ದಿರುವುದರಲ್ಲಿ ಏನೂ ಅಚ್ಚರಿಯಿಲ್ಲ' ಎಂದಳು. ಈ ಹೆಂಗಸರಿಗೆ ಅದೆಷ್ಟೊಂದು ಸೂಕ್ಷ್ಮಗಳನ್ನು ಗಮನಿಸುವ ಸಾಮರ್ಥ್ಯವಿದೆ ಎಂದುಕೊಂಡೆ. ಸುಗಂಧ ಹೇಳಿದಳು 'ನಿಮ್ಮ ಚಿತ್ರಗಳಿಗೆ ರೂಪದರ್ಶಿಯಾಗಲು ನಾನು ಒಪ್ಪಿದ್ದೇನೆ. ಕಲಾಲೋಕಕ್ಕೆ ನನ್ನೀ ರೂಪದಿಂದ ಅಷ್ಟಾದರೂ ಉಪಕಾರವಾಗಲಿ'. ನನ್ನ ಆನಂದ ಮೇರೆ ಮೀರಿತು, ಕಣ್ಣಿಗಳಿಂದಲೇ ಅವಳಿಗೆ ಕೃತಜ್ಞತೆ ಸೂಚಿಸಿದೆ.

ಬರೋಡಾ ಪ್ರವಾಸ ಮುಗಿಸಿ ಬಂದೆವು ನಾನುರಾಜವರ್ಮ. ಬರೋಡಾ ನಗರ ತುಂಬಾ ಕೊಳಕಾಗಿತ್ತು. ಅರಮನೆ ತುಂಬಾ ಕತ್ತಲಗವಿ ಎನಿಸಿತು ನನಗೆ. ಹಿಂತಿರುಗಿ ಬಂದ ಮೇಲೆ ಭಾವನಗರ್ ಸಂಸ್ಥಾನದ ರಾಜಕುಟುಂಬದ ತೈಲಚಿತ್ರಗಳನ್ನು ನಾನು ರಾಜವರ್ಮ ಸೇರಿ ಪೂರೈಸಿಕೊಟ್ಟೆವು. ನಾನು ಮುಖ್ಯ ವ್ಯಕ್ತಿಗಳ ಚಿತ್ರ ರಚಿಸಿದರೆ, ರಾಜ ಹಿನ್ನೆಲೆಯ ವರ್ಣ ತುಂಬುತ್ತಿದ್ದ. ಹೀಗಾಗಿ ಕೆಲಸ ಬೇಗನೇ ಮುಗಿಯಿತು. ಈ ರೀತಿಯ ಭಾವಚಿತ್ರ ಕಲೆಯನ್ನು ನನಗೆ ಮಾಡಲು ಪ್ರೇರೇಪಿಸಿದವರು ನಾರಾಯಣ ಮೆನನ್. ಜೊತೆಗೆ ಥಿಯೊಡೋರ್ ಜಾನ್‌ಸನ್ ರವರ ಬಳಿ ನಾನು ತೈಲ ವರ್ಣದ ಚಿತ್ರಣ ಕಲಿತದ್ದು ಇದೀಗ ನನಗೆ ತುಂಬಾ ಸಹಕಾರಿಯಾಯಿತು. ರಾಜ ಕುಟುಂಬದವರನ್ನು ಚಿತ್ರೀಕರಿಸಲು ಸುಲಭವಾಯಿತು. ನನ್ನ ಚಿತ್ರಗಳು ಎಲ್ಲರ ಮೆಚ್ಚುಗೆ ಪಡೆದವು.

### ಸುಗಂಧ

ರವಿವರ್ಮ 'ಪಾನ್' (ವೀಳ್ಯದೆಲೆ ಅಡಿಕೆ) ಜಗಿಯುತ್ತಾ ಏನೋ ಚಿತ್ರಿಸುತ್ತಿದ್ದ. ಅದು ಅವನ ಅಭ್ಯಾಸ. ಅವನಿಗೆ ಪಾನ್ ಮಡಚಿಕೊಡುತ್ತಿದ್ದ ರಾಮಯ್ಯ ಕೇಳಿದ 'ಇದ್ಯಾಕೆ ರವಿ ನಿದ್ರಿಸುವ ಹೆಂಗಸಿನ ಚಿತ್ರ ಬರೆಯುತ್ತಿದ್ದಿ?' ರವಿವರ್ಮ ಉತ್ತರಿಸಿದ 'ನೀನು ನನ್ನ ಬಾಲ್ಯದ ಗೆಳೆಯ. ಸಂಸ್ಕೃತ ಪಂಡಿತ ಕೂಡ. ನಿನಗೆ ಇಷ್ಟೂ ತಿಳಿಯಲಿಲ್ಲವೆ? ಇವಳು ನಿದ್ರಿಸುತ್ತಿಲ್ಲ. ಕನಸು ಕಾಣುತ್ತಿದ್ದಾಳೆ. ಅನಿರುದ್ಧನನ್ನು ಇವಳ ಕನಸಿನಲ್ಲಿ ಚಿತ್ರಿಸುತ್ತೇನೆ. ಹೇಗೂ ಈ ದಿನ ಸುಗಂಧ ಗುರುವಾರವಾದ್ದರಿಂದ ಉಪವಾಸವಿರುತ್ತಾಳೆ; ಬರುವುದಿಲ್ಲ, ಹೋಗಿ ಗೋದವರ್ಮನನ್ನು ವೀಣೆಯೊಂದಿಗೆ ಬರ ಹೇಳು. ಉಷಾ ಸ್ವಪ್ನವನ್ನು ಬಣ್ಣಿಸುವ ಹಾಡನ್ನು ಕೇಳಬೇಕೆನಿಸಿದೆ.'

ನಿಜ ಬರೋಡಾದಿಂದ ರವಿವರ್ಮ ಬಂದ ಮೇಲೆ ನಾನುಕಮಲಾ ಅವನ ಅನೇಕ ಪುರಾಣ ಪ್ರಸಂಗಗಳ ಸ್ತ್ರೀ ಪಾತ್ರಗಳಿಗೆ ರೂಪದರ್ಶಿಗಳಾಗಿದ್ದೆವು. ಬರೋಡಾ ಸಂಸ್ಥಾನದ ಆರ್ಟ್ ಗ್ಯಾಲರಿಗಾಗಿ ಹಂಸ ದಮಯಂತಿ, ಸೀತಾ ಸ್ವಯಂವರ, ದೇವಕಿ ಕೃಷ್ಣ, ನಳ ದಮಯಂತಿ, ದ್ರೌಪದಿ ವಸ್ತ್ರಾಪಹರಣ, ಶಂತನುಗಂಗೆ, ಕೀಚಕ ಸೈರಂಧ್ರಿ, ಅರ್ಜುನ ಸುಭದ್ರ, ಹರಿಶ್ಚಂದ್ರ ತಾರಾಮತಿ ಚಿತ್ರಗಳಿಗೆ ನಾವಿಬ್ಬರೂ ನಮ್ಮ ಸಹಕಾರ ನೀಡಿದ್ದೆವು. ನಾನು ಸ್ಟುಡಿಯೊ ಪ್ರವೇಶಿಸಿದಾಗ ರಾಮಯ್ಯ ಕೆಳಗಿಳಿದು ಹೋದ. 'ಇದೇನು ಈ ದಿನ ನೀನು ಬರುವುದಿಲ್ಲವೆಂದು ಕೊಂಡೆನಲ್ಲ' ಎಂದ ರವಿವರ್ಮ ಮುಗುಳ್ನಗುತ್ತಾ.

'ಹೌದು, ಆದರೆ ಮನೆಯಲ್ಲಿ ಪೂಜೆಯಿತ್ತು. ಹಾಗಾಗಿ ಪ್ರಸಾದ ತಂದೆ ಎನ್ನುತ್ತಾ ಕೊಟ್ಟೆ. ಮತ್ತೆ ನಾನೇ ಅವನು ಬರೆಯುತ್ತಿದ್ದ ಚಿತ್ರ ನೋಡಿ ಹಾಗಾದರೆ ಈಗ ಈ ಚಿತ್ರ ಮುಂದುವರೆಸುತ್ತೀಯಾ?' ಎಂದೆ. ಅಷ್ಟರಲ್ಲಿ ನನ್ನ ಕಣ್ಣಿಗೆ ತೆರೆ ಹಾಕಿ ಇಟ್ಟಿದ್ದ ಮತ್ತೊಂದು ಚಿತ್ರದೆಡೆಗೆ ದೃಷ್ಟಿ ಹರಿಯಿತು. ಚೌಕಟ್ಟಿನ ಬಳಿ ಹೋಗಿ ಬಟ್ಟೆ ಸರಿಸಲು ಹೋದಾಗ, ರವಿವರ್ಮ ಓಡಿ ಬಂದು